ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/47/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| **ಶ್ರೀ.ಕಮಟಿ ಉರ್ಪ ಬಾರಿಕರ ಹನುಮಂತಪ್ಪ ತಂದೆ ಲೇಟ್ ಹನುಮಂತಪ್ಪ**<br>**ವಕೀಲರು : ಶ್ರೀ ನಾಗೇಶ** | **ಕಮ್ಮಟಿ ಗಂಗಾಧರ ತಂದೆ ನಾಗಪ್ಪ**<br>**ವಕೀಲರು : ಹೆಚ್ ಸುಜಾತ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ದೇವಗೊಂಡನಹಳ್ಳಿ** | **57/AB1** | 2.75 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಶ್ರೀ ಬಾರಿಕರ ಹನುಮಂತಪ್ಪ ತಂದೆ ಲೇಟ್ ಹನುಮಂತಪ್ಪ ಇವರು ದಿನಾಂಕ 14/11/2014 ರಂದು ಅರ್ಜಿ ಸಲ್ಲಿಸಿ ಮೂಲ ಪಟ್ಟಾದಾರರಾದ ನಾಗಪ್ಪ ತಂದೆ ಬಾರಿಕರ ಹನುಮಂತಪ್ಪ ಇವರು 14/05/2012 ರಂದು ಮರಣ ಹೊಂದಿದ ಕಾರಣ ಮತ್ತು ಅವರ ಪತ್ನಿ ಮಲ್ಲವ್ವ ಕೂಡ ಪೌತಿಯಾದ ಕಾರಣ ತನ್ನ ಹೆಸರಿಗೆ ತಮ್ಮ ಸಹೋದರನ ಆಸ್ತಿಯನ್ನು ಪೌತಿ ಪಟ್ಟಾ ಬದಲಾವಣೆ ಮಾಡಲು ಕೋರಿ ವಂಶವೃಕ್ಷ ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿಗಳನ್ನು ಸಲ್ಲಿಸಿದ ಮೇರೆಗೆ ಎಂಆರ್‌ಸಂಖ್ಯೆ ಹೆಚ್21/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಶ್ರೀ ಕಮ್ಮಟಿ ಗಂಗಾಧರ ತಂದೆ ನಾಗಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗು ಪ್ರತಿವಾದಿ ಪರ ನ್ಯಾಯವಾದಿಗಳಿಗೆ ಅವಕಾಶ ನೀಡಿ ದಿನಾಂಕ 19/01/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ 23/07/2015 ರಂದು ಅಂತಿಮಗೊಳಿಸಲಾಯಿತು.

ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ.ಪ್ರತಿವಾದಿಗಳ ಪರವಾಗಿ ಅವರ ವಕೀಲರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯಲ್ಲಿ ದಾವಾ ಜಮೀನಿನ ಬಗ್ಗೆ ಹೂವಿನ ಹಡಗಲಿಯ ಜೆ ಎಮ್ ಎಫ್ ಸಿ ನ್ಯಾಯಾಲಯದಲ್ಲಿ ಓ ಎಸ್ ನಂ10/2015 ಪ್ರಕರಣ ದಾಖಲಿಸಿದ್ದು ದಾವಾ ಜಮೀನಿಗೆ ಸಂಬಂದಿಸಿದಂತೆ ಯಾವುದೇ ಆದೇಶಗಳನ್ನು ನೀಡಬಾರದೆಂದು ಕೋರಿರುತ್ತಾರೆ. ಜೆ ಎಮ್ ಎಫ್ ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದರಿಂದ ಈ ಕೆಳಕಂಡ .

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಪ್ರತಿವಾದಿಗಳು ನೀಡಿದ ದಾಖಲೆಗಳನ್ವಯ ದೇವಗೊಂಡನಹಳ್ಳಿ ಗ್ರಾಮದ ದಾವಾ ಜಮೀನಿನ ಬಗ್ಗೆ ಹೂವಿನ ಹಡಗಲಿಯ ಜೆ ಎಮ್ ಎಫ್ ಸಿ ನ್ಯಾಯಾಲಯದಲ್ಲಿ ಓ ಎಸ್ ನಂ10/2015 ಪ್ರಕರಣ ದಾಖಲಾಗಿದ್ದು ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಪ್ರಕರಣವನ್ನು ವಿಲೇಗೊಳಿಸಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ದೇವಗೊಂಡನಹಳ್ಳಿ** | **57/AB1** | 2.75 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

25/6/16

**ತಹಶೀಲ್ದಾರರು**
**ಹಡಗಲಿ.**

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.